# ಹರಿಕಥಾಮೃತಸಾರ - ೦೨

## ಕರುಣಾ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಶ್ರವಣ ಮನಕಾನಂದವೀವುದು | ಭವಜನಿತ ದುಃಖಗಳ ಕಳೆವುದು
ವಿವಿಧ ಭೋಗಗಳಿಹಪರಂಗಳಲಿತ್ತು ಸಲಹುವುದು ||
ಭುವನ ಪಾವನವೆನಿಪ ಲಕುಮಿ|ಧವನ ಮಂಗಳ ಕಥೆಯ ಪರಮೋ
ತ್ಸವದಿ ಕಿವಿಗೊಟ್ಟಾಲಿಪುದು ಭೂಸುರರು ದಿನದಿನದಿ || ||೦೨-೦೧||

ಮಳೆಯ ನೀರೋಣಿಯಲಿ ಪರಿಯಲು | ಬಳಸರೂರೊಳಗಿದ್ದ ಜನರಾ
ಜಲವು ಹೆದ್ದೊರೆಗೂಡೆ ಮಜ್ಜನಪಾನಗೈದಪರು ||
ಕಲುಷ ವಚನಗಳಾದರಿವು ಬಾಂ|ಬೊಳೆಯ ಪೆತ್ತನ ಪಾದ ಮಹಿಮಾ |
ಜಲಧಿ ಪೊಕ್ಕು ದರಿಂದ ಮಾಣ್ದಪರೇ ಮಹೀಸುರರು|| ||೦೨-೦೨||

ಶ್ರುತಿ ತತಿಗಳಗಭಿಮಾನಿ ಲಕುಮಿ | ಸ್ತುತಿಗಳಿಗೆ ಗೋಚರಿಸದಪ್ರತಿ |
ಹತ ಮಹೈಶ್ವರ್ಯಾದ್ಯಖಿಳ ಸದ್ಗುಣಗಣಾಂಭೋಧಿ ||
ಪ್ರತಿದಿವಸ ತನ್ನಂಘ್ರಿ ಸೇವಾ|ರತ ಮಹಾತ್ಮರು ಮಾಡುತಿಹ ಸಂ |
ಸ್ತುತಿಗೆ ವಶನಾಗುವನಿವನ ಕಾರುಣ್ಯಕೇನೆಂಬೆ ||೦೨-೦೩||

ಮನವಚನಕತಿದೂರ ನೆನೆವರ|ನನುಸರಿಸಿ ತಿರುಗುವನು ಜಾಹ್ನವಿ |
ಜನಕ ಜನರೊಳಗಿದ್ದು ಜನಿಸುವ ಜಗದುದರ ತಾನು ||
ಘನಮಹಿಮ ಗಾಂಗೇಯನುತ ಗಾ|ಯನವ ಕೇಳುತ ಗಗನಚರವಾ |
ಹನ ದಿವೌಕಸರೊಡನೆ ತಿರುಗುವ ಮನೆಮನೆ ಗಳಲ್ಲಿ || ||೦೨-೦೪||

ಮಲಗಿ ಪರಮಾದರದಿ ಪಾಡಲು | ಕುಳಿತು ಕೇಳುವ ಕುಳಿತು ಪಾಡಲು |
ನಿಲುವ ನಿಂತರೇ ನಲಿವ ನಲಿದರೆ ಒಲಿವೆ ನಿಮಗೆಂಬ ||
ಸುಲಭನೋ ಹರಿ ತನ್ನವರನರ|ಘಳಿಗೆ ಬಿಟ್ಟಗಲನು ರಮಾಧವ |
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ || ||೦೨-೦೫||

ಮನದೊಳಗೆ ತಾನಿದ್ದು ಮನವಂ|ದಿನಿಸಿಕೊಂಬನು ಮನದ ವೃತ್ತಿಗ |
ಳನುಸರಿಸಿ ಭೋಗಗಳನೀವನು ತ್ರಿವಿಧ ಚೇತನಕೆ ||
ಮನವನಿತ್ತರೆ ತನ್ನನೀವನು | ತನುವ ದಂಡಿಸಿ ದಿನದಿನದಿ ಸಾ |
ಧನವ ಮಾಳ್ಪರಿಗಿತ್ತಪನು ಸ್ವರ್ಗಾದಿಭೋಗಗಳ || ||೦೨-೦೬||

ಪರಮ ಸತ್ಪುರುಷಾರ್ಥರೂಪನು । ಹರಿಯು ಲೋಕಕೆ ಎಂದು ಪರಮಾ ।
ದರದಿ ಸದುಪಾಸನೆಯಗೈವರಿಗಿತ್ತಪನು ತನ್ನ ॥
ಮರೆದು ಧರ್ಮಾರ್ಥಗಳ ಕಾಮಿಸುವರಿಗೆ ನಗುತತಿಶೀಘ್ರದಿಂದಲಿ ।
ಸುರಪತನಯ ಸುಯೋಧನರಿಗಿತ್ತಂತೆ ಕೊಡುತಿಪ್ಪ ॥ ॥೦೨-೦೭॥

ಜಗವನೆಲ್ಲವ ನಿರ್ಮಿಸುವ ನಾಲ್ಮೊಗನೊಳಗೆ ತಾನಿದ್ದು ಸಲಹುವ ।
ಗಗನಕೇಶನೊಳಿದ್ದು ಸಂಹರಿಸುವನು ಲೋಕಗಳ ॥
ಸ್ವಗತಭೇದ ವಿವರ್ಜಿತನು ಸರ್ವಗ ಸದಾನಂದೈಕ ದೇಹನು ।
ಬಗೆಬಗೆಯ ನಾಮದಲಿ ಕರೆಸುತ ಭಕುತರನು ಪೊರೆವ ॥ ॥೦೨-೦೮॥

ಒಬ್ಬನಲಿ ನಿನ್ತಾಡುವನು ಮತ್ತೊಬ್ಬನಲಿ ನೋಡುವನು ಬೇಡುವ ।
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗಿ ॥
ಅಬ್ಬರದ ಹೇದ್ದೈವನಿವ ಮತ್ತೊಬರನು ಲೆಕ್ಕಿಸನು ಲೋಕದೊ ।
ಳೊಬ್ಬನೇ ತಾ ಬಾಧ್ಯ ಬಾಧಕನಾಹ ನಿರ್ಭೀತ ॥ ॥೦೨-೦೯॥

ಶರಣಜನಮಂದಾರ ಶಾಶ್ವತ । ಕರುಣಿ ಕಮಲಾಕಾಂತ ಕಾಮದ ।
ಪರಮಪಾವನತರ ಸುಮಂಗಳಚರಿತ ಪಾರ್ಥಸಖ ॥
ನಿರುಪಮಾನಂದಾತ್ಮನಿರ್ಗತ । ದುರಿತ ದೇವವರೇಣ್ಯನೆಂದಾ ।
ದರದಿ ಕರೆಯಲು ಬಂದೋದಗುವನು ತನ್ನವರ ಬಳಿಗೆ ॥ ॥೦೨-೧೦॥

ಜನನಿಯನು ಕಾಣದಿಹ ಬಾಲಕ । ನೆನೆನೆನೆದು ಹಲುಬುತಿರೆ ಕತ್ತಲೆ ।
ಮನೆಯೊಳಗಡಗಿದ್ದವನ ನೋಡುತ ನಗುತ ಹರುಷದಲಿ॥
ತನಯನಂ ಬಿಗಿದಪ್ಪಿ ರಂಬಿಸಿ । ಕನಲಿಕೆಯ ಕಳೆವಂತೆ ಮಘುಸೂ ।
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು ॥ ॥೦೨-೧೧॥

ಇಟ್ಟಿಕಲ್ಲನು ಭಕುತಿಯಿಂದಲಿ । ಕೊಟ್ಟ ಭಕುತಗೆ ಮೆಚ್ಚಿ ತನ್ನನೆ ।
ಕೊಟ್ಟ ಬಡಬ್ರಾಹ್ಮಣನ ಒಪ್ಪಿಡಿಯವಲಿಗಖಿಳಾರ್ಥ ॥
ಕೇಟ್ಟ ಮಾತುಗಳೇನದೇ ಚೈದ್ಯನ । ಪೊಟ್ಟೆಯೊಳಗಿಂಬಿಟ್ಟ ಬಾಣದ ।
ಲಿಟ್ಟ ಭೀಷ್ಮನವಗುಣಗಳೆಣಿಸಿದನೆ ಕರುಣಾಳು ॥ ॥೦೨-೧೨॥

ಧನವ ಸಂರಕ್ಷಿಸುವ ಫಣಿ ತಾನುಣದೆ ಮತ್ತೊಬ್ಬರಿಗೆ ಕೊಡದನು ।
ದಿನದಿ ನೋಡುತ ಸುಖಿಸುವಂದದಿ ಲಕುಮಿವಲ್ಲಭನು ॥
ಪ್ರಣತರನು ಕಾದಿಹನು ನಿಷ್ಕಾಮನದಿ ನಿತ್ಯಾನಂದಮಯ ದು ।
ರ್ಜನರ ಸೇವೆಯನೊಲ್ಲನಪ್ರತಿಮಲ್ಲ ಜಗಕೆಲ್ಲ ॥ ॥೦೨-೧೩।

ಬಾಲಕನ ಕಲಭಾಷೆ ಜನನಿಯು | ಕೇಳಿ ಸುಖಪಡುವಂತೆ ಲಕುಮಿ |
ಲೋಲ ಭಕುತರು ಮಾಡುತಿಹ ಸಂಸ್ತುತಿಗೆ ಹಿಗ್ಗುವನು ||
ತಾಳೆ ತನ್ನವರಲ್ಲಿ ಮಾಡುವ | ಹೇಳನವ ಹೆದ್ದೈವ ವಿದುರನ |
ಆಲಯದಿ ಪಾಲುಂಡು ಕುರುಪನ ಮಾನವನೇ ಕೊಂಡ || ||೦೨-೧೪||

ಸ್ಮರಿಸುವವರಪರಾಧ ಗಳ ತಾ|ಸ್ಮರಿಸ ಸಕಲೇಷ್ಟ ಪ್ರದಾಯಕ |
ಮರಳಿ ತನಗರ್ಪಿಸಲು ಕೊಟ್ಟುದನಂತಮಡಿ ಮಾಡಿ ||
ಪರಿಪರಿಯಲಿಂದುಣಿಸಿ ಸುಖಸಾ|ಗರದಿ ಲೋಲಾಡಿಸುವ ಮಂಗಳ |
ಚರಿತ ಚಿನ್ಮಯಗಾತ್ರ ಲೋಕ ಪವಿತ್ರ ಸುಚರಿತ್ರ|| ||೦೨-೧೫||

ಏನು ಕರುಣಾನಿಧಿಯೋ ಹರಿ ಮತ್ತೇನು ಭಕ್ತಾಧೀನನೋ ಇ |
ನ್ನೇನು ಈತನಲೀಲೆ ಇಚ್ಛಾಮಾತ್ರದಲಿ ಜಗವ ||
ತಾನೆ ಸೃಜಿಸುವ ಪಾಲಿಸುವ ನಿರ್ವಾಣ ಮೊದಲಾದಖಿಳ ಲೋಕ |
ಸ್ಥಾನದಲಿ ಮತ್ತವರನಿಟ್ಟಾನಂದಬಡಿಸುವನು || ||೦೨-೧೬||

ಜನಪ ಮೆಚ್ಚಿದರೀವ ಧನ ವಾ|ಹನ ವಿಭೂಷಣ ವಸನ ಭೂಮಿಯ |
ತನುಮನಗಳಿತ್ತಾದರಿಪರುಂಟೇನೋ ಲೋಕದೊಳು ||
ಅನವರತ ಸೇಸೇವವರನುತಾ|ಸನವೆ ಮೊದಲಾದಾಲಯ ದೋಳಿ |
ಟ್ಟಣುಗನದ್ದಲವರ ವಶನಾಗುವ ಮಹಾಮಹಿಮ || ||೦೨-೧೭||

ಭುವನಪಾವನಚರಿತ ಪುಣ್ಯ | ಶ್ರವಣಕೀರ್ತನ ಪಾಪನಾಶನ |
ಕವಿಭಿರೀಡಿತ ಕೈರವದಳಶ್ಯಾಮ ನಿಸ್ಸೀಮ ||
ಯುವತಿವೇಷದಿ ಹಿಂದೆ ಗೌರೀ|ಧವನ ಮೋಹಿಸಿ ಕೆಡಿಸಿ ಉಳಿಸಿದ |
ಇವನ ಮಾಯವ ಗೆಲುವನಾವನು ಈ ಜಗತ್ರಯದಿ || ||೦೨-೧೮||

ಪಾಪಕರ್ಮವ ಸಹಿಸುವಡೇ ಲ|ಕ್ಷ್ಮೀಪತಿಗೆ ಸಮರಾದ ದಿವಿಜರ |
ನೀ ಪಯೋಜಭವಾಂಡದೊಳಗಾವಲ್ಲಿ ನಾ ಕಾಣೆ ||
ಗೋಪ ಗುರುವಿನ ಮಡದಿ ಭೃಗು ನಗ|ಚಾಪ ಮೊದಲಾದವರು ಮಾಡ್ದ ಮ |
ಹಾಪರಾಧಗಳೆಣಿಸಿದನೆ ಕರುಣಾಸಮುದ್ರ ಹರಿ || ||೦೨-೧೯||

ಅಂಗುಟಾಗ್ರದಿ ಜನಿಸಿದಮರತ|ರಂಗಿಣಿಯು ಲೋಕತ್ರಯಗಳಘ |
ಹಿಂಗಿಸುವಳವ್ಯಾಕೃತಾಕಾಶಾಂತ ವ್ಯಾಪಿಸಿದ ||
ಇಂಗಡಲ ಮಗಳೊಡೆಯನಂಗೋ|ಪಾಂಗಗಳಲಿಪ್ಪಮಲನಂತ ಸು |
ಮಂಗಳಪ್ರದನಾಮ ಪಾವನಮಾಳ್ಪುದೇನರಿದು || ||೦೨-೨೦||

ಕಾಮಧೇನು ಸುಕಲ್ಪತರು ಚಿಂತಾಮಣಿ ಗಳಮರೇಂದ್ರಲೋಕದಿ |
ಕಾಮಿತಾರ್ಥಗಳೀವವಲ್ಲದೇ ಸೇವೆ ಮಾಳ್ಪರಿಗೆ ||
ಶ್ರೀಮುಕುಂದನ ಪರಮಮಂಗಳನಾಮ ನರಕಸ್ಥರನು ಸಲಹಿತು |
ಪಾಮರರ ಪಂಡಿತರೆನಿಸಿ ಪುರುಷಾರ್ಥ ಕೊಡುತಿಹುದು || ||೦೧-೧೦||

ಮನದೊಳಗೆ ಸುಂದರ ಪದಾರ್ಥವ | ನೆನೆದು ಕೊಡೆ ಕೈಕೊಂಡು ಬಲು ನೂ |
ತನ ಸುಶೋಭಿತಗಂಧಸುರಸೋಪೇತ ಫಲರಾಶಿ ||
ದ್ಯುನದಿನಿವಹಗಳಂತೇ ಕೊಟ್ಟವರನು ಸದಾ ಸಂತೈಸುವನು ಸ |
ದ್ಗುಣವ ಕದ್ದವರಘವ ಕದಿವನು ಅನಘನೆಂದೆನಿಸಿ || ||೦೧-೧೧||

ಚೇತನಾಚೇತನವಿಲಕ್ಷಣ | ನೂತನ ಪದಾರ್ಥಗಳೊಳಗೆ ಬಲು |
ನೂತನತಿಸುಂದರಕೆ ಸುಂದರ ರಸಕೇ ರಸರೂಪ ||
ಜಾತರುಪೊದರ ಭವಾದ್ಯರೊಳಾತತ ಪ್ರತಿಮಪ್ರಭಾವ ಧ |
ರಾತಳದೊಳೆಮ್ಮೊಡನೆಯಾಡುತಲಿಪ್ಪ ನಮ್ಮಪ್ಪ || ||೦೧-೧೨||

ತಂದೆ ತಾಯ್ಗಳು ತಮ್ಮ ಶಿಶುವಿಗೆ | ಬಂದ ಭಯಗಳ ಪರಿಹರಿಸಿ ನಿಜ |
ಮಂದಿರದಿ ಬೇಡಿದುದನಿತ್ತಾದರಿಸುವಂದದಲಿ ||
ಹಿಂದೆ ಮುಂದೆಡಬಲದಿ ಒಳಹೊರಗಿಂದಿರೇಶನು ತನ್ನವರನೆಂ |
ದೆಂದು ಸಲಹುವನಾಗಸದವೊಲಿತ್ತ ನೋಡಿದರು || ||೦೧-೧೩||

ಒಡಲ ನೆಳಲಂದದಲಿ ಹರಿ ನಮ್ಮೊಡನೆ ತಿರುಗುವ ಒಂದರೆಕ್ಷಣ |
ಬಿಡದೆ ಬೆಂಬಲನಾಗಿ ಭಕ್ತಾಧೀನನೆಂದೆನಿಸಿ ||
ತಡೆವ ದುರಿತೌಘಗಳ ಕಾಮದ | ಕೊಡುವ ಸಕಲೇಷ್ಟಗಳ ಸಂತತ |
ನಡೆವ ನಮ್ಮಂದದಲಿ ನವಸುವಿಶೇಷ ಸನ್ಮಹಿಮ || ||೦೧-೧೪||

ಬಿಟ್ಟವರ ಭವಪಾಶದಿಂದಲಿ | ಕಟ್ಟುವನು ಬಹುಕರುಣನಿವ ಶಿ |
ಷ್ಟೇಷ್ಟನೆಂದರಿದನವರತ ಸದ್ಭಕ್ತಿಪಾಶದಲಿ ||
ಕಟ್ಟುವರ ಭವಕಟ್ಟು ಬಿಡಿಸುವ | ಸಿಟ್ಟಿನವನಿವನಲ್ಲ ಕಾಮದ |
ಕೊಟ್ಟು ಕಾವನು ಸಕಲ ಸೌಖ್ಯವನಿಹಪರಂಗಳಲಿ || ||೦೧-೧೫||

ಕಣ್ಣಿಗೆವೆಯಂದದಲಿ ಕೈ ಮೈತಿಣ್ಣಿಗೊದಗುವ ತರದಿ ಪಲ್ಗಳು |
ಪಣ್ಣುಫಲಗಳನಗಿದು ಜಿಹ್ವೆಗೆ ರಸವನೀವಂತೆ ||
ಪುಣ್ಯಫಲಗಳನೀವಂದದಲಿ ನುಡಿ | ವೆಣ್ಣನಾಳ್ಕ್ಯಾಂಡದೊಳು ಲಕ್ಷ್ಮಣ |
ನಣ್ಣನೊದಗುವ ಭಕ್ತರವಸರಕಮರಗಣಸಹಿತ || ||೦೧-೧೬||

ಕೊಟ್ಟುದನು ಕೈಗೊಂಬರ್ಕ್ಷಣ । ಬಿಟ್ಟಗಲ ತನ್ನವರ ದುರಿತಗ ।
ಅಟ್ಟುವನು ದೂರದಲಿ ದುರಿತಾರಣ್ಯಪಾವಕನು ।
ಬೆಟ್ಟ ಬೆನ್ನಲಿ ಹೊರಿಸಿದವರೊಳು । ಸಿಟ್ಟುಮಾಡಿದನೇನೊ ಹರಿ ಕಂ ।
ಗೆಟ್ಟ ಸುರರಿಗೇ ಸುಧೆಯನುಣಿಸಿದ ಮುರಿದನಹಿತರನು ॥ ॥೦೨-೨೮॥

ಖೇದ ಮೋದ ಜಯಾಪಜಯ ಮೊದ|ಲಾದ ದೋಷಗಳಿಲ್ಲ ಚಿನ್ಮಯ ।
ಸಾದರದಿ ತನ್ನಂಘ್ರಿಕಮಲವ ನಂಬಿ ತುತಿಸುವರ ॥
ಕಾದುಕೊಂಡಿಹ ಪರಮಕರುಣಮ|ಹೋದಧಿಯುತನ್ನವರು ಮಾಳ್ಪಪ ।
ರಾಧಗಳ ನೋಡದಲೆ ಸಲಹುವ ಸರ್ವಕಾಮದನು ॥ ॥೦೨-೨೯॥

ಮೀನ ಕೂರ್ಮ ವರಾಹ ನರಪಂ|ಚಾನನಾತುಳಶೌರ್ಯ ವಾಮನ ।
ರೇಣುಕಾತ್ಮಜ ರಾವಣಾದಿನಿಶಾಚರಧ್ವಂಸಿ ॥
ಧೇನುಕಾಸುರಮಥನ ತ್ರಿಪುರವ । ಹಾನಿಗೈಸಿದ ನಿಪುಣ ಕಲಿಮುಖ ।
ದಾನವರ ಸಂಹರಿಸಿ ಧರ್ಮದಿ ಕಾಯ್ದ ಸುಜನರನು ॥ ॥೦೨-೩೦॥

ಶ್ರೀ ಮನೋಹರ ಶಮಲವರ್ಜಿತ । ಕಾಮಿತಪ್ರದ ಕೈರವದಳ ।
ಶ್ಯಾಮ ಕುಲಶರಣ್ಯ ಶಾಶ್ವತ ಶರ್ಕರಾಕ್ಷಸಖ ॥
ಸಾಮಸನ್ನುತ ಸಕಲಗುಣಗಣ|ಧಾಮ ಶ್ರೀ ಜಗನ್ನಾಥವಿಠಲ ।
ಈ ಮಹಿಯೊಳವತರಿಸಿ ಸಲಹಿದ ಸಕಲಸುಜನರನು ॥ ॥೦೨-೩೧॥

oooooooooooooooooooooooooooooooooo